**<u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕೊಪ್ಪಳ</u>**

**ಸಿ.ಸಿ. ಸಂಖ್ಯೆಃ 225/2020**

**ದಿನಾಂಕಃ 27-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

| | |
|---|---|
| ಸಿಡಬ್ಲ್ಯೂ- | 01 |
| ಪಿಡಬ್ಲ್ಯೂ- | 02 |

| | |
|---|---|
| ಹೆಸರು | ಪ್ರಭಾಕರ ಭಟ್ಟ |
| ತಂದೆ | ಬೀಮಭಟ್ಟ ಜೋಷಿ |
| ವಯಸ್ಸು | 54 ವರ್ಷ |
| ಕೆಲಸ | ತಹಶೀಲ್ದಾರ ಡಿಸಿ ಆಫೀಸ್ ಧಾರವಾಡ |
| ವಾಸಸ್ಥಳ | ಧಾರವಾಡ |

**<u>ಮುಖ್ಯ ವಿಚಾರಣೆ : ಹಿರಿಯ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ನಾನು 2020 ಕೊಪ್ಪಳ ತಹಶಿಲ್ದಾರ ಆಫೀಸ್ ನಲಿ ಶಿರಸ್ತೆದಾರ ಅಂತಾ ಇದ್ದೆ. ಆಗ ದಿಃ- 25-02-2020 ರಂದು ಮಾನ್ಯ ತಹಶೀಲ್ದಾರ ಕೊಪ್ಪಳರವರು ನನಗೆ ಕಚೇರಿಯ ಆದೇಶ ನೀಡಿ ಸರ್ವೆ ನಂ. 271/1 ಪಹಣಿಗಳನ್ನು ತಹಶೀಲ್ ಕಾರ್ಯಲಯದಿಂದ ನೀಡಿದ್ದು, ಅದರಲ್ಲಿ ನರಸಪ್ಪ ವೆಂಕಪ್ಪ ಎಂದು ಇರುತ್ತದೆ, ಮೂಲ ಪಹಣಿಗಳಲ್ಲಿ ಗಾಳಿ ಎಂದು ಇರುವುದಿಲ್ಲ, ಶ್ರೀ ಶರಣಪ್ಪ ಇರುವುದು ಗಾಳಿ ಎಂದು ತಿದ್ದಿ ತಿದ್ದುಪಡೆ ಮಾಡಿರುತ್ತಾರೆ ಎಂದು, ಇವರ ಮಾನ್ಯ ತಹಶೀಲ್ದಾರವರು ಆದೇಶ ಮಾಡಿದ ಪ್ರಯುಕ್ತ, ನಾನುಆ ಆದೇಶದನ್ವಯ ಶರಣಪ್ಪನ ವಿರುದ್ದ ನಾನು ಕೊಪ್ಪಳ ನಗರ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿದ್ದೇನೆ. ಸದರಿ ದೂರನ್ನು ದಿಃ- 03-04-2020 ರಂದು ನೀಡಿರುತ್ತೇನೆ.

2. ಅದರೊಂದಿಗೆ ವಕೀಲರ ನೊಟಿಸ, ಪ್ರತ್ಯುತ್ತರ, ಹಳೆ ಪಹಣಿಗಳು ಕೊಟ್ಟಿದ್ದೇನೆ. ನಂತರ ಅದೇ ಪೊಲೀಸರು ಪಂಚನಾಮೆ ಮಾಡಿದರು. ಹಬೀಬ್ ಮತ್ತು ಮಂಜುನಾಥ ಪಂಚರು ಇದ್ದರು. ತಹಶೀಲ್ದಾರ ಆಫೀಸ್ ಕೊಪ್ಪಳದಲ್ಲಿ ಪಂಚನಾಮೆ ಮಾಡಿದರು. ಸದರಿ ದೂರು ನೋಡಿ ಗುರುತಿಸಿದ್ದು ಅದನ್ನು ನಿಪಿ 9 ಎಂದು, ಸಹಿಯನ್ನು ನಿಪಿ 9(ಎ) ಎಂದು ಗುರುತಿಸಲಾಯಿತು. ಆರೋಪಿ ಬರೆದ ಅರ್ಜಿ, ತಹಶೀಲ್ದಾರವರ ಆದೇಶ ಪ್ರತಿ, ಲೀಗಲ್ ನೊಟಿಸ ಪ್ರತಿ, ರಿಪ್ಲೆ ಪ್ರತಿ, ಮರು ರಿಪ್ಲೆ ಪ್ರತಿ, ಹಿಂಬರಹ, ಜರಾಕ್ಸ ಪ್ರತಿಗಳು ಇರುತ್ತವೆ, ಅವುಗಳನ್ನು ನೋಡಿ ಗುರುತಿಸಿದ್ದಾರೆ. ಸಾಕ್ಷಿ ಆರೋಪಿಯನ್ನು ನೋಡಿ ಗುರುತಿಸಿದ್ದಾರೆ. ಇನ್ನೊಬ್ಬರ ಆಸ್ತಿ ವರ್ಗಾವಣೆ ಮಾಡಿಕೊಳ್ಳಬೇಕೆಂದಿದ್ದ ಅದಕ್ಕಾಗಿ ಫಿರ್ಯಾದಿ ಕೊಡಲಾಗಿದೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಸ್ ಎ ಎಸ್  ವಕೀಲರಿಂದಃ**

ನಾನು ದಿಃ- 07-03-2022 ರಂದು ಕೊಪ್ಪಳದಿಂದ ವರ್ಗಾವಾಗಿ ಬಳ್ಳಾರಿಗೆ ಹೋದೆ. ಈ ಪ್ರಕರಣದಲ್ಲಿ ಸಾಕ್ಷಿ ಹೇಳಲು ಮೊದಲು ಬಾರಿ ಸಮನ್ಸ ಬಂದ ದಿನಾಂಕ ನೆನಪಿಲ್ಲಾ. 2 ನೇ ಬಾರಿ ಬಂದ ದಿನಾಂಕ ನೆನಪಿಲ್ಲ. ಆದರೆ 2 ನೇ ಬಾರಿ ಕೊರ್ಟಗೆ ಬಂದು ಹೋಗಿದ್ದೆ. ಸಾಕ್ಷಿ ಹೇಳಲಿಲ್ಲಾ ಕೊರ್ಟ ನಡೆಯಲಿಲ್ಲಾ ಮುಂದಿನ ದಿನಾಂಕ ಕೊಟ್ಟಿದ್ದರು. ತಹಶೀಲ್ದಾರ ಮಾಡಿದ ಆದೇಶ ಸಂಖ್ಯೆ ನೋಡಿ ಹೇಳಬಲ್ಲೆ.

2. ನಾನು ಪೊಲೀಸರಿಗೆ ಕೊಟ್ಟ ದಾಖಲೆಗಳನ್ನು ನಾನು ಸರ್ಟಿಫೈ ಮಾಡಿ ಕೊಟ್ಟಿಲ್ಲ. ಇನ್ನೊಬ್ಬ ಉಪತಹಶೀಲ್ದಾರಾಗಿದ್ದ ಸ್ವಾಮಿಯವರು ಅಟೆಸ್ಟೆಡ್ ಮಾಡಿಕೊಟ್ಟಿದ್ದಾರೆ ಎನ್ನುತ್ತಾರೆ. ನಾನು ಆಗ ರೆಕಾರ್ಡ ಶಿರಸ್ತೆದಾರ ಇದ್ದೆ ಎಂದರೆ ಸರಿ. ಪಹಣಿಗಳನ್ನು ನಾನೇ ಕೊಡುತ್ತಿದ್ದೆ ಎಂದರೆ ಸರಿ. ಕೇಸ್ ವರ್ಕರ್ ತಯಾರಿಸುತ್ತಿದ್ದ ಅದಕ್ಕೆ ನಾನು ಸಹಿ ಹಾಕಿ ಕೊಡುತ್ತಿದ್ದೆ ಎನ್ನುತ್ತಾರೆ ಮತ್ತು ನಾನೇ ಕೊಟ್ಟಿದ್ದೇನೆ ಎನ್ನುತ್ತಾರೆ.

3. 2017 ರಲ್ಲಿ ಪಹಣಿ ತಿದ್ದಿ ಆರೋಪಿ ಅಪರಾಧ ಮಾಡಿದರೆ 2020 ರಲ್ಲಿ ಏಕೆ ಫಿರ್ಯಾದಿ ಕೊಟ್ಟಿದ್ದಿರಿ ಎಂಬ ಪ್ರಶ್ನೆಗೆ ಸಾಕ್ಷಿಯು ನಮ್ಮ ತಹಶೀಲ್ದಾರವರು 2020 ರಲ್ಲಿ ಆದೇಶ ಕಳುಹಿಸಿಕೊಟ್ಟರು ಆದ್ದರಿಂದ ನಾನು 2020 ರಲ್ಲಿ ಮಾಡಿದೆ ಎನ್ನುತ್ತಾರೆ. ಆರೋಪಿ ಶರಣಪ್ಪನ ಜರಾಕ್ಸ ಅಂಗಡಿ ಕೊಪ್ಪಳ ತಹಶೀಲ್ದಾರ ಕಚೇರಿ ಎದುರುಗಡೆ ಇದೆ ಎಂದರೆ ಗೊತ್ತಿಲ್ಲ. ಈ ಶರಣಪ್ಪ ನಮ್ಮ ಕಚೇರಿಗೆ ಬರುತ್ತಿದ್ದ ಆಗಾಗ ನೋಡುತ್ತಿದ್ದೆ, ಈಗ ಸಹ ನೊಡಿದ್ದೇನೆ, ಆದ್ದರಿಂದ ಈಗ ಗುರುತಿಸಿದ್ದೇನೆ.

4. ನಾನು ಪೊಲೀಸ್ ಠಾಣೆಗೆ ಯಾವುದೇ ದಾಖಲೆ ಕೊಟ್ಟಿಲ್ಲ ಎನ್ನುವುದು ಸರಿಯಲ್ಲ. ಪಂಚರು ನಂತರ ಬಂದರು. 1 ರಿಂದ 3 ಗಂಟೆಯವರೆಗೆ ಪಂಚನಾಮೆ ಮಾಡಿದರು ಎಂದರೆ ಸರಿ. ಪೊಲೀಸ್ ಠಾಣೆಯಲಿ ಪಂಚನಾಮೆ ಮಾಡಿಲ್ಲ, ನಮ್ಮ ಕಚೇರಿಯಲ್ಲಿ ಮಾಡಿದ್ದಾರೆ. ತಹಶೀಲ್ದಾರವರ ಆದೇಶದ ಪ್ರಕಾರ ಫಿರ್ಯಾದಿ ಕೊಟ್ಟೆ ಎಂದರೆ ಸರಿ. ಚಾಸಾ 4 ಗವಿಸಿದ್ದಪ್ಪನ ಮಾತು ಕೇಳಿ ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಹಣ ಕೊಡುತ್ತೇನೆ ಪಹಣಿ ತಿದ್ದು ಎಂದು ನನಗೆ ಆಮಿಷ ನೀಡಿರುವುದಿಲ್ಲ. ನನಗೆ ಈ ಆರೋಪಿ ಯಾವುದೇ ಒತ್ತಾಯ ಮಾಡಿಲ್ಲ ಮತ್ತು ಬೆದರಿಕೆ ಒಡ್ಡಿಲ್ಲ,

5. ಎಫ್ ಐ ಆರ್ ಮಾಡಲು ತಹಶೀಲ್ದಾರವರು 25-02-2020 ರಂದು ಆದೇಶ ಮಾಡಿದರು,

ನಾನು ದಿಃ- 03-04-2020 ರಂದು ಈ ಫಿರ್ಯಾದಿ ಕೊಟ್ಟಿದ್ದೇನೆ. ನನ್ನ ಕೆಲಸದ ಒತ್ತಡ ಇದ್ದುದರಿಂದ ಸ್ವಲ್ಪ ತಡವಾಗಿ ಕೊಟ್ಟೆ. ಕೆಲಸದ ಒತ್ತಡದಿಂದ ತಡ ಮಾಡಿದೆ ಎಂದು ದೂರಿನಲ್ಲಿ ವಿಶೇಷವಾಗಿ ಕಾಣಿಸಿಲ್ಲಾ ಎಂದರೆ ಸರಿ. ಶರಣಪ್ಪರವರು ನಮ್ಮ ಕಚೇರಿಯ ರಿಜಿಸ್ಟರ್ ನಂ. 16 ರಲ್ಲಿ ತಿದ್ದುಪಡೆ ಮಾಡಿಲ್ಲ ಅವರು ನಮ್ಮಿಂದ ಅವರ ನಕಲನ್ನು ಪಡೆದು ಅದರಲ್ಲಿ ತಿದ್ದಿಕೊಂಡಿದ್ದಾರೆ.

**<u>ಮರು ವಿಚಾರಣೆಃ ಇಲ್ಲ</u>**

(ಸಾಕ್ಷಿಯು ನುಡಿದಂತೆ ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.
ಸಹಿ/-
**ಸಿ.ಜೆ.ಎಮ್., ಕೊಪ್ಪಳ.**